**O.S.No.105/2017 PW.1**

ದಿಃ **22-10-2021** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಬಿ ವಕೀಲರವರಿಂದ:

ಈ ದಾವೆಯನ್ನು ಹೂಡಲು ಮೃತ ವಾದಿ ಮಾಹಿತಿಯನ್ನು ಕೊಟ್ಟಿರುತ್ತಾರೆ. ಈ ದಾವೆಯನ್ನು ಪ್ರತಿವಾದಿಯ ಮೇಲೆ ದಾವಾ ಸ್ವತ್ತಿಗಾಗಿ ನಾವು ಹೂಡಿರುತ್ತೇವೆ. ದಾವಾ ಸ್ವತ್ತಲ್ಲದೇ ನಮ್ಮ ಮನೆತನಕ್ಕೆ ಸುಮಾರು **50** ಎಕರೆ ಇದೆ ಎಂದರೆ ಸರಿ. ಸದರಿ ಅಸ್ತಿಗಳು ಪಿರ್ತಾಜಿತ ಅಸ್ತಿಗಳು ಎಂದರೆ ಸರಿ. ನಮ್ಮ ಮನೆತನದ ಅಸ್ತಿಯಲ್ಲಿ ಪಾಲು ವಿಭಾಗ ಮಾಡಿಕೊಂಡು ನಾವು ಕಬ್ಜಾದಲ್ಲ ಇದ್ದೇವೆ ಎಂದರೆ ಸರಿ. ನನ್ನ ಪಾಲಿಗೆ **9** ಎಕರೆ ಜಮೀನು ಮತ್ತು **2** ಮನೆಗಳು ಬಂದಿರುತ್ತದೆ. ನನ್ನ ಪಾಲಿಗೆ ಬಂದ ಜಮೀನನ್ನು ಹರವಿ ರುದ್ರಪ್ಪ ಇವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. **3** ಎಕರೆ ಜಮೀನನ್ನು ಮನೆ ಕಟ್ಟಿಕೊಳ್ಳಲು ಮಾರಾಟ ಮಾಡಿದ್ದೇನೆ ಎಂದರೆ ಸರಿ. ವಾದಿ ನಂಃ**02** ಸಹ ತನ್ನ ಪಾಲಿಗೆ ಬಂದ ಕೆಲವು ಜಮೀನುಗಳನ್ನು ಮಾರಾಟ ಮಾಡಿದ್ದಾನೆ ಎಂದರೆ ಸರಿ. ಮೃತ ಒಂದನೇ ಪ್ರತಿವಾದಿಯ ಮಕ್ಕಳು ಸಹ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪಾಲು ವಿಭಾಗದಂತೆ ನಮಗೆ ಬಂದ ಜಮೀನುಗಳನ್ನು ನಾವು ಅನುಭವಿಸುತ್ತಾ ಇದ್ದೇವೆ ಮತ್ತು ಪ್ರತ್ಯೇಕವಾಗಿ ಇದ್ದೇವೆ ಎಂದರೆ ಸರಿ.

**02. 1985** ರ ಪಾಲು ವಿಭಾಗದಲ್ಲಿ ದಾವಾ ಸ್ವತ್ತು ನನ್ನ ಪಾಲಿಗೆ ಬಂದಿತ್ತದೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪಾಲು ಪಟ್ಟಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ, ಮನೆಯಲ್ಲಿ ಇರುತ್ತದೆ. ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯವಾಕಾಶ ಕೇಳಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.